ಉದ್ದವಿರುತ್ತಿತ್ತು!) ಮುಡಿದು ಠೀವಿಯಿಂದ ಶಾಲೆಗೆ ಹೋಗುತ್ತಿದ್ದೆವು. ಕೆಲವೊಮ್ಮೆ ಎರಡು ಜಡೆಗಳಿಗೂ ಬೇರೆ ಬೇರೆಯಾಗಿ ಮಾಲೆ ಮುಡಿದರೆ, ಕೆಲವೊಮ್ಮೆ ಉದ್ದದ ಒಂದೇ ಮಾಲೆಯನ್ನು ಒಂದು ಜಡೆಯಿಂದ ಇನ್ನೊಂದು ಜಡೆಗೆ ತಂದು ಎರಡೂ ಜಡೆಗಳಿಗೆ ಇಳಿಬಿಟ್ಟು (ಇಂಗ್ಲಿಷ್‌ನ 'ಎಮ್' ಅಕ್ಷರದ ಆಕಾರದಂತೆ) ಮುಡಿಯುತ್ತಿದ್ದೆವು. ಹೂವು ಮುಡಿಯಲು ಹೇರ್‌ಪಿನ್ ಬೇಕೆಂದೇನೂ ಇರಲಿಲ್ಲ. ಅಮ್ಮ ಕೂದಲಿನಲ್ಲೇ ನಾಜೂಕಾಗಿ ತೆಳ್ಳಗಿನ ಎಳೆ ತೆಗೆದು ಅದರ ನಡುವೆ ಹೂವಿನ ಮಾಲೆ ಹಾಳಾಗದಂತೆ ಸೇರಿಸಿ ಮುಡಿಸುತ್ತಿದ್ದಳು. 'ಎಷ್ಟು ಚೆನ್ನಾಗಿದೆಯೇ ಹೂವು, ನಿಮ್ಮನೆಯಲ್ಲೇ ಬಿಟ್ಟಿದ್ದಾ?' ಎಂದು ಸ್ನೇಹಿತೆಯರು ಕೇಳುವಾಗ ನಮ್ಮ ಠೀವಿ ದುಪ್ಪಟ್ಟಾಗುತ್ತಿತ್ತು. ಆ ಮಾಲೆ ಅವತ್ತಿಗೆ ಇನ್ನೂ ಬಾಡದಿದ್ದರೆ, ಸಂಜೆಯ ವೇಳೆ ಅದರ ಮೇಲೆ ನೀರು ಚಿಮುಕಿಸಿ ಮಾರನೇ ದಿನವೂ ಮುಡಿಯಲು ಇಟ್ಟುಕೊಳ್ಳುತ್ತಿದ್ದೆವು. ಕೆಲವೊಮ್ಮೆ ಹೂಮಾಲೆ ತುಂಬಾ ಉದ್ದವಿದ್ದರೆ ಅದರಲ್ಲೇ ಸ್ವಲ್ಪ ಭಾಗವನ್ನು ತರಗತಿಯ ಟೀಚರ್‌ಗೋ, ಆಪ್ತ ಸ್ನೇಹಿತೆಗೋ ಕೊಡುವ ಪರಿಪಾಠವೂ ಇತ್ತು. ಇವೆಲ್ಲಾ ಪರೋಕ್ಷವಾಗಿ ವಸ್ತುಗಳನ್ನು ಜತನವಾಗಿರಿಸಿಕೊಳ್ಳುವ, ಪರಸ್ಪರ ಹಂಚಿಕೊಳ್ಳುವುದರಲ್ಲಿ ಖುಷಿ ಕಾಣುವ ನೀತಿಯಾಗಿರುತ್ತಿದ್ದವು.

ಒಮ್ಮೆ ನನ್ನ ಗೆಳತಿ ಆಶಾ ಒಂದು ದೊಡ್ಡದಾದ ಹೂವನ್ನು ಮುಡಿದು ಬಂದಿದ್ದಳು. ಆ ಹೂವು ಎಷ್ಟು ದೊಡ್ಡದಿತ್ತೆಂದರೆ ಅವಳನ್ನು ಮುಂದಿನಿಂದ ನೋಡಿದರೂ ಹಿಂದೆ ಅವಳ ತಲೆಯ ಎರಡೂ ಬದಿಗಳಲ್ಲಿ, ಕಿವಿಗಳ ಹಿಂದೆ ಆ ಹೂವಿನ ಎಸಳುಗಳು ಕಾಣುತ್ತಿದ್ದವು. ಅದರ ಹೆಸರೇ ರಾಕ್ಷಸ ಕಮಲ. ಡೇಲಿಯಾ ಜಾತಿಯ ಹೂವು. ಆ ದಿನ ಎಲ್ಲರ ಕಣ್ಣುಗಳೂ ಅವಳು ಮುಡಿದಿದ್ದ ಹೂವಿನ ಮೇಲೆ. ಕೆಲವರಂತೂ "ಏ ಆಶಾ, ಆ ಹೂವಿನ ಗಿಡದ ಗೆಡ್ಡೆ ಇದ್ರೆ ನಮಗೂ ತಂದುಕೊಡು. ನಾವೂ ಮನೆಯ ಮುಂದೆ ಗಿಡ ಮಾಡುತ್ತೇವೆ" ಎಂದು ಕೇಳಿದ್ದರು. ಮತ್ತೊಮ್ಮೆ ಅವಳು ಸೇವಂತಿಗೆಯಂತೆ ಪುಟ್ಟದಾಗಿದ್ದ ಸುಂದರವಾದ ಕಮಲದ ಹೂವನ್ನು ಮುಡಿದು ಬಂದಿದ್ದಳು. ಅದು ಜೇನುಕಮಲವಂತೆ. ಆ ಹೂವಿನ ಗೆಡ್ಡೆಗಾಗಿ ಕೆಲವರು ಅವಳನ್ನು ಪೀಡಿಸಿದ್ದೂ ಆಯಿತು. ನಮಗಂತೂ ಮುಡಿಯಲು ಇಂತಹ ಹೂವೇ ಆಗಬೇಕು ಎಂದೇನಿರಲಿಲ್ಲ. ಮಲ್ಲಿಗೆ, ಗೊರಟೆ, ಅಬ್ಬಲಿಗೆ, ಗುಲಾಬಿ ಹೂಗಳಲ್ಲದೆ ಕಟು ವಾಸನೆಯುಳ್ಳ ಸಂಪಿಗೆಯನ್ನೂ ಮುಡಿಯುತ್ತಿದ್ದೆವು, ಕೇದಿಗೆ ಹೂವನ್ನೂ ಮುಡಿಯುತ್ತಿದ್ದೆವು. ಉದ್ದವಾದ ತಿಳಿಹಳದಿ ಬಣ್ಣದ ಕೇದಿಗೆ ಹೂವನ್ನು ಮುಡಿಯಲು ಬರುವಂತೆ ಮಡಿಸಿ, ಅದು ಬಿಚ್ಚಿಹೋಗದಂತೆ ಅದಕ್ಕೆ ಒಂದು ಹಿಡಿ(ಪೊರಕೆ)ಕಡ್ಡಿಯನ್ನು ಸಿಗಿಸಿ ಮುಡಿಯುತ್ತಿದ್ದೆವು. ಕೊನೆಗೆ ಸೀತೆದಂಡೆ ಹೂವನ್ನೂ(ಆರ್ಕಿಡ್) ಬಿಡುತ್ತಿರಲಿಲ್ಲ! ಜಡೆಗೆ ಕಟ್ಟುವ ರಿಬ್ಬನನ್ನು ಕೂಡಾ ಹೂವಿನಂತೆ ಕಟ್ಟಿಕೊಳ್ಳುವುದಿತ್ತು. ಅಂಗಡಿಯಲ್ಲಿ ಸಿಗುವ ಪ್ಲಾಸ್ಟಿಕ್ ಹೂ ಕೂಡ ಕೆಲವರ ಜಡೆಯನ್ನು ಅಲಂಕರಿಸುತ್ತಿತ್ತು. ಕೆಲವೊಮ್ಮೆ ತಲೆ ತುಂಬಾ ಹೂವು ಮುಡಿದೆವೆಂದರೆ ಹೂವಿನ ಗಿಡವನ್ನೇ ಹೊತ್ತುಕೊಂಡು ಬಂದಂತಿರುತ್ತಿತ್ತು! ಕಾಲಕ್ಕನುಗುಣವಾಗಿ ಬೆಳೆಯುವ ಹೂಗಳನ್ನು ಹೇಗಾದರೂ ಹೊಂದಿಸಿ ಕಟ್ಟಿ ಮಾಲೆ ಮಾಡಿಯೋ ಅಥವಾ ಡೇಲಿಯಾ, ಗುಲಾಬಿಯಂತಹ ಒಂದೊಂದೇ ಹೂವಾದರೂ ಸರಿ, ಹೂವು ಮುಡಿಯುವುದೆಂದರೆ ಅಷ್ಟು ಆಸೆ, ಸಂಭ್ರಮ.

70–80ರ ದಶಕದ ಚಲನಚಿತ್ರಗಳಲ್ಲೂ ಈ ಹೂವು ಮುಡಿಯುವ ಸಂಭ್ರಮದ ಸನ್ನಿವೇಶವನ್ನು ಕಾಣಬಹುದಿತ್ತು. ಸಿನಿಮಾವೊಂದರಲ್ಲಿ ನಾಯಕ ಮನೆಗೆ ಬರುವಾಗ ಮಲ್ಲಿಗೆಯ ದಂಡೆಯನ್ನು ಕಾಗದದ ಪೊಟ್ಟಣದಲ್ಲಿ ತರುತ್ತಾನೆ. ಅದನ್ನು ಪ್ರೀತಿಯಿಂದ